ಒ. ಎಸ್ೋ 50/2020
ಪಿ.ಡಬ್ಲ್ಯೂ:01

<u>ದಿಃ 14.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಸಿ.ಎಂ. ವಕೀಲರಿಂದ</u>

ನರಸಿಂಹಪ್ಪ ರವರಿಗೆ ವೆಂಕಟಲಕ್ಷ್ಮಮ್ಮ ರವರು ಮೊದಲನೇ ಹೆಂಡತಿಯಾಗಬೇಕು. ವೆಂಕಟಲಕ್ಷ್ಮಮ್ಮ ರವರಿಗೆ ಗಂಗಪ್ಪ ಹಾಗೂ ಗಂಗಮ್ಮ ನವರು ಮಕ್ಕಳು ಎನ್ನುವುದು ಸರಿ. ಗಂಗಮ್ಮನವರಿಗೆ ಒಬ್ಬ ಮಗನಿರುತ್ತಾರೆ. ಅವರೆಂದರೆ ಅಶ್ವಥನಾರಾಯಣ ಆಗಿರುತ್ತಾರೆ. ನಾನು ಮತ್ತು ಪ್ರತಿವಾದಿ 1 ರಿಂದ 5 ರವರು ಎಲ್ಲರೂ ಒಟ್ಟಾಗಿ ಇರುತ್ತೇವೆ. ನನ್ನ ತಂದೆಯ ತಂದೆಯ ಹೆಸರು ನರಸಿಂಹಪ್ಪ ಆಗಿದ್ದು, ಅಂದರೆ ನನ್ನ ತಾತನ ಹೆಸರು ನರಸಿಂಹಪ್ಪ ಆಗಿದ್ದು ಅವರ ತಂದೆಯ ಹೆಸರು ಕೂಡ ನರಸಿಂಹಪ್ಪ ಆಗಿರುತ್ತದೆ. ಅವರನ್ನು ಅಂದರೆ ನನ್ನ ಮುತ್ತಾತನನ್ನು ಯರ್ರಚಿನ್ನಪ್ಪನವರ ನರಸಿಂಹಪ್ಪ ಎಂದು ಕೂಡ ಕರೆಯುತ್ತಿದ್ದರು ಎನ್ನುವುದು ಸರಿ.

2) ದಿನಾಂಕ 27.09.1976 ರಲ್ಲಿ ನಾನು 2 ವರ್ಷದ ಹುಡುಗನಾಗಿದ್ದೆ, ಸದರಿ ಸಂದರ್ಭದಲ್ಲಿ ನಮ್ಮ ತಾತನ ಕುಟುಂಬದಲ್ಲಿ ಒಂದು ವ್ಯವಸ್ಥಾ ಪತ್ರ ಆಗಿತ್ತು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ, ಸದರಿ ವ್ಯವಸ್ಥಾ ಪತ್ರದ ಬಗ್ಗೆ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಸದರಿ ವ್ಯವಸ್ಥಾ ಪತ್ರದ ಪ್ರಕಾರ ಎ ಷೆಡ್ಯೂಲ್ ಆಸ್ತಿಗಳು ನನ್ನ ತಂದೆಯಾದ ಗಂಗಪ್ಪ ನವರ ಭಾಗಕ್ಕೆ ಬಂದಿತ್ತು ಎನ್ನುವುದು ಸರಿಯಲ್ಲ, ಬಿ ಷೆಡ್ಯೂಲ್ ಆಸ್ತಿಗಳು 6ನೇ ಪ್ರತಿವಾದಿಯರ ಭಾಗಕ್ಕೆ ಹೋಗಿತ್ತು ಎನ್ನುವುದು ಸರಿಯಲ್ಲ, ಸಿ ಷೆಡ್ಯೂಲ್ ಆಸ್ತಿಯು ಅಶ್ವಥನಾರಾಯಣಪ್ಪ ಎನ್ನುವವರಿಗೆ ಹಾಗೂ ಡಿ ಷೆಡ್ಯೂಲ್ ಆಸ್ತಿಗಳು ಹೆಣ್ಣು ಮಕ್ಕಳಾದ ಶ್ರೀಮತಿ ನಾಗರತ್ನಮ್ಮ, ರುಕ್ಮಿಣಿಯಮ್ಮ ಹಾಗೂ ಗಂಗದೇವಮ್ಮ ನವರ ಭಾಗಕ್ಕೆ ಹೋಗಿತ್ತು ಎನ್ನುವುದು ಸರಿಯಲ್ಲ.

3) ನಾನು ಮತ್ತು ಪ್ರತಿವಾದಿಗಳು 1976 ರಿಂದಲೂ ಇಲ್ಲಿಯವರೆಗೂ ಒಟ್ಟಾಗಿ ಇರುತ್ತೇವೆ ಎಂದು ತೋರಿಸಲು ಆಹಾರ ಪಡಿತರ ಚೀಟಿ ಇರುತ್ತದೆ. ಸದರಿ ಆಹಾರ ಪಡಿತರ ಚೀಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನನ್ನ ತಂದೆ ಚಿಕ್ಕಬಳ್ಳಾಪುರ ನ್ಯಾಯಾಲಯದಲ್ಲಿ ಮೂಲ ದಾವೆ ಸಂಃ 41/2003 ನ್ನು ಸಲ್ಲಿಸಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲುಃ ಶ್ರೀ. ಸಿ.ಎಂ. ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.